


Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD
Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –38 ದಿನಾಂಕ : 01–04–2026


**ಈ ವರ್ಷದ ಏಪ್ರಿಲ್ 1 ನೇ ತಾರೀಖಿನಂದು ಈ ತಿಂಗಳ ಮೊದಲ ವಾರದ ಸಭೆ. ಅಂದು ವಕೀಲರಾದ ಸಾಧ್ವಿ ಸಿ. ಕಾಂತ್, Intellectual Property Rights (IPR) Consultant and Legal Educator, Shivamogga ಇವರಿಂದ ಸೈಬರ್ ಅಪರಾಧಗಳು ಹಾಗೂ ಜನ ಸಾಮಾನ್ಯರು ಹೇಗೆ ಇದರಲ್ಲಿ ತಮಗೆ ಗೊತ್ತಿಲ್ಲದೇ ಸಿಲುಕಿಕೊಂಡು ಮೋಸ ಹೋಗುತ್ತಾರೆ ಎಂಬುದರ ಬಗ್ಗೆ ಉಪನ್ಯಾಸ ಏರ್ಪಡಿಸಲಾಗಿತ್ತು. ಅಧ್ಯಕ್ಷರಾದ ರೊ. ಆರ್. ಆನಂದರವರು ಹಾಗೂ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವೇದಿಕೆಯಲ್ಲಿದ್ದು, ಸಾರ್ಜೆಂಟ್ ರೊ.ಎಸ್. ಮಂಜುನಾಥರವರು ಅಧ್ಯಕ್ಷರಿಗೆ ಕಾಲರ್ ತೊಡಿಸಿ ಸಭೆ ಕಲಾಪಕ್ಕೆ ಅನುವು ಮಾಡಿದರು.**










ರೊ.ಹೇಮಾವತಿ ಮಂಜುನಾಥರವರಿಂದ 'ಮೂಷಿಕ ವಾಹನ ಪಾಹಿ ಗಜಾನನ, ಪ್ರಥಮ ವಂದನ ಗೌರಿ ನಂದನ' ಎಂಬ ಗಣಪತಿಯ ಗೀತೆಯ ಗಾಯನದೊಂದಿಗೆ ಸಭೆ ಆರಂಭವಾಯಿತು. ರೊ.ಪಿಎಜಿ. ಎನ್.ಎಸ್. ಶ್ರೀಧರ್‌ರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಹುಟ್ಟು ಹಬ್ಬದ ಶುಭಾಶಯಗಳನ್ನು ಕೋರಿದರು. ಈ ಸಂದರ್ಭದಲ್ಲಿ ತಮ್ಮ ಹುಟ್ಟು ಹಬ್ಬ ಆಚರಿಸಿ ಕೊಂಡಿರುವ ರೊ. ವಿ. ಶ್ರೀನಿವಾಸರವನ್ನು ವೇದಿಕೆಗೆ ಆಹ್ವಾನಿಸಿ ನೆನಪಿನ ಕಾಣಿಕೆ ನೀಡಲಾಯಿತು. ರೊ.ಎನ್.ಜಿ. ಉಷಾರವರು ಅಂದಿನ ಸಭೆಯ ಮುಖ್ಯ ಅತಿಥಿ ವಕೀಲರಾದ ಸಾಧ್ವಿ ಸಿ.ಕಾಂತರವರನ್ನು ಸಭೆಗೆ ಪರಿಚಯ ಮಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಕೀಲರಾದ ಸಾಧ್ವಿ ಸಿ.ಕಾಂತರವರು ಮಾತನಾಡುತ್ತಾ, ಈ ಸಭೆಯಲ್ಲಿ ಆಗಮಿಸಿರುವವರು ಹೆಚ್ಚಿನ ಪಾಲು ಹಿರಿಯ ನಾಗರೀಕರಿದ್ದೀರಿ. ನಮ್ಮ ಇಂದಿನ ವಿಷಯದ ಬಗ್ಗೆ ಮಾತನಾಡುವುದು ಅದು ನಿಮಗೆ ಅನುಸರಿಸಲು ಕಷ್ಟಸಾಧ್ಯ. ಆದರೆ ಇಂದು ನಿರಂತರವಾಗಿ ನಡೆಯುತ್ತಿರುವ ಸೈಬರ್ ಅಪರಾಧಗಳ ಬಗ್ಗೆ ತಿಳುವಳಿಕೆ ಮೂಡಿಸಲು ಪ್ರಯತ್ನಿಸುತ್ತೇನೆ ಎಂದರು. ಭಾರತದ ಸಂವಿಧಾನದ ಪ್ರಕಾರ ಜೀವಂತವಿರುವವರಿಗೂ ಸತ್ತವರಿಗೂ ಕಾನೂನುಗಳು ಲಾಗು ಆಗುತ್ತವೆ. ಅದರಂತೆ ಮೂಲಭೂತ ಹಕ್ಕುಗಳು ಹುಟ್ಟಿದಾರಭ್ಯ ಆರಂಭವಾಗುತ್ತವೆ. ಈ ನೆಲದ ಕಾನೂನಿಗೆ ಅನುಗುಣವಾಗಿ ನಮಗೆ ಸ್ವಾತಂತ್ರ್ಯ ಲಭ್ಯವಿದೆ. ಅದರಂತೆ ಇತ್ತೀಚಿನ ದಿನಗಳಲ್ಲಿ ಮೊಬೈಲ್ ಬಳಕೆ ವಿಚಾರವೂ ಒಂದಂಶ. ಅದರಲ್ಲಿ ಏನೇನು ನೋಡಬೇಕು. ನೋಡಬಾರದು ಎನ್ನುವ ಸ್ವಾತಂತ್ರವೂ ನಮಗೆ ಇದೆ. ಆದರೆ ಮೊಬೈಲ್‌ನ್ನು ಹೇಗೆ ಬಳಕೆ ಮಾಡಿಕೊಳ್ಳಬೇಕು. ಇದನ್ನು ಬಳಕೆ ಮಾಡುತ್ತಾ ನಾವೇ ಹೇಗೆ ಬಲಿಪಶುಗಳಾಗುತ್ತೇವೆ ಎಂಬುದು ನಮಗೆ ಗೊತ್ತಿಲ್ಲ ಎಂದರು.

## ಈ ವಾರದ ಸಭೆ

**ದಿನಾಂಕ: 08–04–2026, ಬುಧವಾರ** **ಸಂಜೆ 6:45 ರಿಂದ**

**ಮುಖ್ಯ ಅತಿಥಿ:**

**ಶ್ರೀ ತುರುವನೂರು ಮಲ್ಲಿಕಾರ್ಜುನ ಎಂ. ವಿ.**

**ಕನ್ನಡ ಉಪನ್ಯಾಸಕರು, ಜ್ಞಾನದೀಪ ಸೀನಿಯರ್ ಸೆಕೆಂಡರಿ ಸ್ಕೂಲ್, ಜಾವಳ್ಳಿ**

**ವಿಷಯ:**

**"ಸಂತ ಶಿಶುನಾಳ ಶರೀಫರ ಪ್ರಸ್ತುತತೆ"**

**ಶರೀಫರ ಹಾಡುಗಳೊಂದಿಗೆ...**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ
















ಮೊಬೈಲ್ ಬಳಕೆಯಲ್ಲಿ ಅಂತರ್‌ಜಾಲವಿದ್ದರಂತೂ, ಮೊಬೈಲ್ ಬಳಕೆಯ ನಮ್ಮ ಪ್ರತಿಯೊಂದು ನಡೆಯನ್ನು ಗಮನಿಸಲಾಗುತ್ತಿರುತ್ತದೆ. ನಾವು ಹೇಗೆ ಸೈಬರ್ ಹೈಜಿನ್ ಆಗಬೇಕು. ಆರೋಗ್ಯ ಮತ್ತು ಇತರೆ ದೈನಂದಿನ ಜೀವನಕ್ಕೆ ಅನುಕೂಲವಾಗುವಂತಹದ್ದನ್ನು ವೀಕ್ಷಿಸಬೇಕು. ನಾವುಗಳು ಎಚ್ಚರಿಕೆಯಿಂದ ಮೊಬೈಲ್‌ನ್ನು ಬಳಸುತ್ತಾ ನಮ್ಮನ್ನು ನಾವು ಕಾಪಾಡಿಕೊಳ್ಳಬೇಕು ಎಂಬುದನ್ನು ತಿಳಿದಿರಬೇಕು. ನೀವು ಅಮೇಜಾನ್, ಜೊಮಾಟೋದಂತಹವುಗಳಿಗೆ ಹಣ ಪಾವತಿ ಮಾಡಿದಾಗ ನಿಮ್ಮ ಬ್ಯಾಂಕಿನ ವ್ಯವಹಾರಗಳು ಟ್ರಾಕ್ ಆಗುತ್ತಿರುತ್ತವೆ. ಆ ಬಗ್ಗೆ ನಿಮ್ಮ ಗಮನವಿರುವುದು ಒಳ್ಳೆಯದು. ನಿಮ್ಮ ಬ್ಯಾಂಕಿನ ಪ್ರತಿಯೊಂದು ವಿವರಗಳೂ ಅಪರಾಧಿಗಳ ಕೈಗೆ ದೊರಕಿರುತ್ತದೆ. ಹಾಗಾದರೆ ಆ ಸಂದರ್ಭದಲ್ಲಿ ಮಾಡಬೇಕಾದ ಕೆಲಸವೆಂದರೆ, ಪ್ರತಿಯೊಂದು ಪಾವತಿಗೂ ಅದರ ಸ್ಕ್ರೀನ್ ಶಾಟ್ ತೆಗೆದುಕೊಳ್ಳಬೇಕು. National Website IPC and CRPC ಗಳಲ್ಲಿ ಈ ತರಹದ ಡಿಜಿಟಲ್ ಎವಿಡೆನ್ಸ್‌ಗಳನ್ನು ಅಡ್ಮಿಟ್ ಮಾಡಿಕೊಳ್ಳುತಾರೆ ಆದ್ದರಿಂದ ನಮಗೆ ತೊಂದರೆಯಾದಾಗ ಬೇಕಾಗುತ್ತದೆ. ಇವೆಲ್ಲ ಬೇಕಾಗುವುದರಿಂದ ಅವರ ಮೊಬೈಲ್ ನಂಬರ್‌ಗಳ ಸ್ಕ್ರೀನ್ ಶಾಟ್‌ಗಳನ್ನು ತೆಗೆದುಕೊಳ್ಳಬೇಕು. ಇದೂ ಒಂದು ದಾಖಲೆಯಾಗುತ್ತದೆ.

ವಿದೇಶಗಳಿಂದ ದೂರವಾಣಿ ಕರೆಗಳು ಬಂದಾಗ ನಾವುಗಳು ತುಂಬಾ ಎಚ್ಚರಿಕೆಯಿಂದಿರಬೇಕು. ಇದರಿಂದ ಡಿಜಿಟಲ್ ಅರೆಸ್ಟ್ ಆಗುವ ಸಂಭವವಿರುತ್ತದೆ. ಕೆಲವೊಮ್ಮೆ ನಮ್ಮ ಮೊಬೈಲ್‌ನ ಕ್ಲೋನಿಂಗ್ ಅಂಶಗಳು ಅಪರಾಧಿಗಳ ಕೈಗೆ ಸಿಕ್ಕು ನಮ್ಮ ಪ್ರತಿಯೊಂದು ಬ್ಯಾಂಕಿನ ವಿವರಗಳು, ನಾವು ಮಾಡುವ ಇನ್ನಿತರೇ ವ್ಯವಹಾರಗಳು ನಿಚ್ಚಳವಾಗಿ ಗೊತ್ತಾಗುತ್ತವೆ. ನಾವುಗಳು ಸೂಪರ್ ಮಾರ್ಕೆಟ್, ಔಷಧಿ ಅಂಗಡಿಗಳಿಗೆ ಭೇಟಿ ಕೊಟ್ಟಾಗ ನಮ್ಮ ಮೊಬೈಲ್ ನಂಬರ್‌ಗಳನ್ನು ಕೇಳುತ್ತಾರೆ. ಯಾವುದೇ ಹಿಂಜರಿಕೆಯಿಲ್ಲದೇ ನಾವುಗಳು ಅದನ್ನು ಕೊಟ್ಟು ಬಿಡುತ್ತೇವೆ. ಆದರೆ ಅದರಿಂದ ಬೇರೆ ರೀತಿಯಲ್ಲಿ ನಮಗೆ ಹಾನಿ ಉಂಟಾಗುತ್ತದೆ. ನಮ್ಮ ಇಡೀ ಡಾಟಾವನ್ನು ಅವರುಗಳಿಗೆ ಒಪ್ಪಿಸಿದಂತಾಗುತ್ತವೆ. ಕೇವಲ 5% ರಿಯಾಯಿತಿ ದೊರೆಯುತ್ತವೆ ಎಂಬ ಉದ್ದೇಶದಿಂದ ನಾವು ನಮ್ಮ ಮೊಬೈಲ್ ನಂಬರನ್ನು ಕೊಟ್ಟಿರುತ್ತೇವೆ. ಆದರೆ ಅದರಿಂದಾಗುವ ಅನಾಹುತ ಅಷ್ಟಿಷ್ಟಲ್ಲ.

ಅದರಂತೆ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂಗಳನ್ನು ನಾವುಗಳು ವೀಕ್ಷಿಸಿದಾಗ ನಮ್ಮ ಪ್ರತಿಯೊಂದು ನಡೆಯು ಗಮನಿಸಲ್ಪಡುತ್ತಿರುತ್ತದೆ. ನಮ್ಮ ಪ್ರತಿಯೊಂದು ಚಲನವಲನಗಳನ್ನು ಇಲ್ಲಿಸ್ಟಡಿ ಮಾಡುತ್ತಾರೆ. ಇಲ್ಲಿ ನಮಗೆ ಗೊತ್ತಿಲ್ಲದೇ ಈ ಕೆಲಸಗಳು ನಡೆಯುತ್ತಿರುತ್ತವೆ. ಹಾಗಾದರೆ ನಮಗೆ ಎಲ್ಲಿ ಸ್ವಾತಂತ್ರ ದೊರೆಯಿತು ಎಂದು ಪ್ರಶ್ನಿಸಿದರು.


ಬ್ಯಾಂಕಿನ ನಮ್ಮ ಹಣಕ್ಕೆ ತೊಂದರೆಯಾದಾಗ ಸೈಬರ್ ಅಪರಾಧಗಳ ಸೆಲ್‌ಗೆ ದೂರು ನೀಡಬೇಕು. ಇದರ ಸಾರ್ವತ್ರಿಕ ದೂರವಾಣಿ ಸಂಖ್ಯೆ 1930 ಆಗಿದ್ದು, ಇಲ್ಲಿ ನಿಮ್ಮ ದೂರನ್ನು ಸಲ್ಲಿಸಬಹುದು. ಮೊದಲು ಬ್ಯಾಂಕುಗಳಿಗೆ ಈ ಬಗ್ಗೆ ಮಾಹಿತಿ ನೀಡಿ, ಅಕೌಂಟ್ ಮತ್ತು ವ್ಯವಹಾರವನ್ನು ಬ್ಲಾಕ್ ಮಾಡಿಸಬೇಕು. ವ್ಯವಹಾರವಾದ ಬಗ್ಗೆ ಸ್ಕ್ರೀನ್ ಶಾಟ್‌ಗಳನ್ನು ತೆಗೆದುಕೊಂಡಿರಬೇಕು. ನ್ಯಾಷನಲ್ ಪೋರ್ಟಲ್‌ಗೆ ದೂರುಗಳನ್ನು ದಾಖಲಿಸಬಹುದಾಗಿದೆ. ಪೋಲೀಸ್ ಠಾಣೆಗೆ ದೂರು ಸಲ್ಲಿಸಬಹುದು. ನಾವು ಪ್ರಸೆನ್ಸ್ ಆಫ್‌ಮೈಂಡ್ ಇಟ್ಟುಕೊಂಡು ವ್ಯವಹರಿಸಬೇಕು. ಏಕೆಂದರೆ ಇಲ್ಲಿ ನಮ್ಮ ಪ್ರತಿಯೊಂದು ಮಾತು ವ್ಯವಹಾರವೂ ದಾಖಲಾಗುತ್ತವೆ. ಆದ್ದರಿಂದ ಯಾವ ಮಾತನ್ನಾಡಬೇಕು ಎಂಬುದರ ಬಗ್ಗೆ ನಮ್ಮ ಗಮನವಿರಬೇಕು ಎಂದರು.







ಆಸ್ಪತ್ರೆಗಳಿಗೆ ಭೇಟಿ ನೀಡಿದಾಗ ಆರಂಭದಲ್ಲಿ ನಮ್ಮ ಬಿ.ಪಿ., ಶುಗರ್ ಚೆಕ್ ಮಾಡುತ್ತಾರೆ. ಆಗ ನಮ್ಮ ದೇಹದ ಪ್ರತಿಯೊಂದು ವಿವರಗಳು ಫಾರ್ಮಾಸುಟಿಕಲ್ ಕಂಪನಿಗಳಿಗೆ ಫ್ರೀಯಾಗಿ ದೊರಕುತ್ತವೆ. ನಾವು ಯಾರಿಗಾದರೂ ದೂರವಾಣಿ ಕರೆ ಮಾಡುತ್ತಿದ್ದ ಹಾಗೆ ಅಲ್ಲಿ ಜಾಹಿರಾತುಗಳು ಬರಲಾರಂಬಿಸುತ್ತವೆ. ಇದು ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂನಂತಹ ಜಾಲತಾಣಗಳಲ್ಲು ಮಾಹಿತಿಗಳು ಅವರುಗಳಿಗೆ ದೊರಕಿ ಜಾಹಿರಾತುಗಳು ಬರಲಾರಂಭಿಸುತ್ತವೆ. ಆದಷ್ಟು ಜವಾಬ್ದಾರಿಯುತವಾಗಿ ಇಂಟರ್‌ನೆಟ್ ಬಳಕೆ ಮಾಡಿಕೊಳ್ಳಬೇಕು. ಯಾವಾಗಲೂ ಇಂಟರ್‌ನೆಟ್ ಚಾಲ್ತಿಯಲ್ಲಿರುವುದು ಬೇಡ. ಮಾತನಾಡುವಾಗ ಹುಷಾರಾಗಿ ಮಾತನಾಡಿ ಎಂದರು. ರೊ.ಪಿಎಜಿ. ಎಸ್. ದತ್ತಾತ್ರಿಯವರು ಈ ಬಗ್ಗೆ ಕೆಲವೊಂದು ಅಂಶಗಳ ಬಗ್ಗೆ ಮುಖ್ಯ ಅತಿಥಿಗಳೊಂದಿಗೆ ಸಂವಾದಿಸಿದರು. ಮಾಜಿ ಅಧ್ಯಕ್ಷರಾದ ರೊ.ಡಿಎಸ್. ನಟರಾಜ್‌ರವರೂ ಸಹ ಪಾಲ್ಗೊಂಡಿದ್ದರು. ರೊ.ಸೆಂಥಿಲ್ ವೇಲನ್‌ರವರು ಎರಡು ಫೋನ್ ಬಳಕೆ ಮಾಡಿಕೊಳ್ಳುವುದು ಒಳಿತು ಎಂದರು. ಹೀಗೆ ಮುಖ್ಯ ಅತಿಥಿಗಳು ಸೈಬರ್ ಅಪರಾಧಗಳು ಹಾಗೂ ನಾವುಗಳು ಅದರಲ್ಲಿ ಸಿಲುಕಿಕೊಳ್ಳುವುದು ಮುಂತಾದ ಹಲವಾರು ವಿಷಯಗಳ ಬಗ್ಗೆ ಮಾತನಾಡಿದರು. ರೊ.ಎಸ್.ಎಂ.ವೀರಭದ್ರಪ್ಪನವರು ಮುಖ್ಯ ಅತಿಥಿಗಳಿಗೆ ಪ್ರಶ್ನಿಸುತ್ತಾ, ಕೊರಿಯರ್ ಮೂಲಕ ಬರುವ ಕೆಲವು ಪಾರ್ಸೆಲ್‌ಗಳಿಗೆ ಯಾರು ಕಳುಹಿಸಿದ್ದಾರೆ ಎಂಬುವ ವಿವರವಿರುವುದಿಲ್ಲ ಅದಕ್ಕೇನು ಮಾಡಬೇಕು ಎಂದರು. ಸ್ವೀಕರಿಸಬಾರದು ಎಂದು ಮುಖ್ಯ ಅತಿಥಿಗಳು ಉತ್ತರಿಸಿದರು. ಒಂದು ವೇಳೆ ಸ್ವೀಕರಿಸಿದರೆ ಅದನ್ನು ತಂದುಕೊಟ್ಟವರ ದೂರವಾಣಿ ಸಂಖ್ಯೆ ವಿಳಾಸ ಪಡೆಯಬೇಕು ಎಂದರು.


ಅಧ್ಯಕ್ಷರಾದ ರೊ.ಆರ್.ಆನಂದರವರು ತಮ್ಮ ಅಧ್ಯಕ್ಷೀಯ ಭಾಷಣ ಮಾಡುತ್ತಾ, ಇದು ತುಂಬಾ ಆಳವಾದ ವಿಸ್ತಾರವಾದ ವಿಷಯವಾಗಿದ್ದು ಸಮಯ ಸಾಕಾಗುವುದಿಲ್ಲ. ಮೊಬೈಲ್ ಬಳಸುವಾಗ ನಮ್ಮ ಸಾಮಾನ್ಯ ಜ್ಞಾನವನ್ನು ಉಪಯೋಗಿಸಿ ಕಾರ್ಯಮಾಡಬೇಕು. ನಿಮ್ಮ ಪ್ರತಿಯೊಂದು ಮಾತು ದಾಖಲಾಗುತ್ತವೆ. ಈ ಬಗ್ಗೆ ನಿಮಗೆ ಅರಿವಿರಬೇಕು. ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯ ನಾಗರೀಕರು ಇರುವುದರಿಂದ ಈ ವಿಷಯದ ಬಗ್ಗೆ ಮುಖ್ಯ ಅತಿಥಿಗಳು ಚೆನ್ನಾಗಿ ಮಾತನಾಡಿ ತಿಳುವಳಿಕೆ ಮೂಡಿಸಿದ್ದಾರೆ. ಅವರಿಗೆ ಎಲ್ಲರ ಪರವಾಗಿ ಕೃತಜ್ಞತೆ ಎಂದರು. ಮುಖ್ಯ ಅತಿಥಿಗಳಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವಂದನಾರ್ಪಣೆ ಮಾಡಿದರು.




## 10. Environment

- Protecting and restoring land, coastal, marine, and freshwater resources
- Enhancing the capacity of communities to support natural resource management and conservation
- Supporting sustainable agriculture, fishing, and aquiculture practices
- Addressing the cause of climate change by reducing the emission of greenhouse gases
- Strengthening ecosystems and communities affected by climate change
- Supporting education initiatives that promote behavior that protects the environment
- Advocating for sustainable consumption to build an economy that uses resources more efficiently
- Addressing environmental justice issues and public health concerns





## ಸಂಪಾದಕೀಯ

### ಇದೆ ಅಥವಾ ಇಲ್ಲ

ಹೀಗೊಂದು ಸಂವಾದ ನಡೆಯುತ್ತಿತ್ತು;
ಚಳಿ ಇದೆಯೆ? ಇದೆ, ಇಲ್ಲ
ಬಿಸಿಲು ಇದೆಯೇ? ಇದೆ, ಇಲ್ಲ
ಕತ್ತಲು ಇದೆಯೆ? ಇದೆ, ಇಲ್ಲ
ನೋವಿದೆಯೇ ? ಇದೆ, ಇಲ್ಲ

ಇದೆ ಮತ್ತು ಇಲ್ಲದರ ಮಧ್ಯೆ, ಇದೆ ಅನ್ನುವುದು, ಇಲ್ಲ ಅನ್ನುವುದು ಕೂಡಾ ಒಂದು ಮನೋಭಾವ ಎಂದು ರೂಪಿಸಲು ಗುರುಶಿಷ್ಯರ ಮಧ್ಯೆ ನಡೆದ ಈ ಪ್ರಶ್ನೆ ಉತ್ತರ ಸರಣಿಯಲ್ಲಿ ಅನೇಕ ವಿಲೋಮಗಳನ್ನು ಉದಾಹರಿಸಲಾಗುತ್ತದೆ. ಇದೆ ಮತ್ತು ಇಲ್ಲ ಎಂಬ ಎರಡು ಪರಿಭಾಷೆಗಳ ನಡುವೆ ಬಾಳಿನ ಸಾರವನ್ನೇ ಆ ಗುರು ರೂಪಿಸಿಬಿಡುತ್ತಾನೆ. ಆಗುವುದು ಮತ್ತು ಆಗದೇ ಇರುವುದು ಕೂಡ ಮತ್ತು ಅದನ್ನು ಸ್ವೀಕರಿಸುವ ಕ್ರಮದ ಬಗ್ಗೆಯೇ ಸಂವಾದ ನಡೆಯುತ್ತದೆ. ಯಾವುದಾದರೂ ಒಂದು ಸಂಗತಿ ಇದೆ ಎಂದರೆ, ಅದು ಇನ್ನೊಂದರ ಗೈರು ಎಂದರ್ಥ.

ಚಳಿ ಇದೆ ಅಂದರೆ, ಅದು ಇದೆ, ಬಿಸಿಲು ಇಲ್ಲ ಎಂದರ್ಥ. ಬಿಸಿಲಿನ ಗೈರು, ಹಾಗಾಗಿ ಅದು ಇದೆ. ಕತ್ತಲು ಕೂಡ ಇದೆ. ಅದು ಬೆಳಕಿನ ಗೈರು ಅಷ್ಟೆ. ಕತ್ತಲು ಇಲ್ಲ. ಯಾಕೆಂದರೆ ಅಲ್ಲಿ ಬೆಳಕಿನ ಆಗಮನ ಇದೆ. ಇನ್ನು ನೋವು? ಅದು ಇಲ್ಲ ಮತ್ತು ಇದೆ. ಇದೆ ಎಂದರೆ ನಲಿವಿನ ಗೈರು. ಇಲ್ಲ ಎಂದರೆ ಅಲ್ಲಿ ನಲಿವು ಮನೆ ಮಾಡಿದೆ ಎಂದರ್ಥ.

ಇವು ಹೀಗೆ ನೋಡಿ. ಒಂದು ಇದ್ದರೆ ಇನ್ನೊಂದು ಇಲ್ಲ. ಕತ್ತಲು ಈ ಮೊದಲೂ ಇತ್ತು. ಆದರೆ ಅನುಭವಕ್ಕೆ ಬರಲಿಲ್ಲ. ಬೆಳಕು ಇನ್ನೆಲ್ಲೋ ಇದ್ದಾಗ ಇಲ್ಲಿ ಕತ್ತಲು ಆವರಿಸಿರುತ್ತದೆ. ಭೂಮಿಯ ಚಲನೆಯ ಸೊಗಸು ನೋಡಿ, ಅದು ತನ್ನ ತಾನು ಸುತ್ತು ಹಾಕಿದಾಗ ಅಲ್ಲಿ ಬೆಳಕಿದ್ದಾಗ ಇಲ್ಲಿ ಕತ್ತಲು, ಅಲ್ಲಿ ಉದಯ ಇಲ್ಲಿ ಅಸ್ತಮಾನ. ಅಲ್ಲೆಲ್ಲೋ ಕಂಬನಿ ಇನ್ನೆಲ್ಲೋ ಹಬ್ಬ. ಡಿವಿಜಿ ಅವರು ಹೇಳಿದ ಹಾಗೆ ಮದುವೆ, ಮಸಣ ಒಂದೊಂದು ಒಂದು ಕಡೆ ಹಾಜರಿರುತ್ತದೆ. ಅಲ್ಲಿ ಮೌನ, ಇಲ್ಲಿ ಬರೀ ಮಾತು. ಸುಖ ಎಂಬುದು ಇಲ್ಲ. ಅಂತ ಅಂದಾಗ ಅದು ಖಾಯಂ ಆಗಿ ಇಲ್ಲ ಅಂತಲ್ಲ. ದುಃಖದ ಭರಾಟೆಯಲ್ಲಿ ಅದು ತಾತ್ಕಾಲಿಕ ಅನುಪಸ್ಥಿತಿ. ಇಡೀ ಊರಿನ ಜನರೆಲ್ಲ ಮಳೆ ಇರದೆ ಕಂಗಾಲಾಗಿ ಮುಗಿಲನ್ನು ನೋಡುತ್ತಾ ಕಣ್ಣೀರು ಸುರಿಸುತ್ತಿದ್ದರೆ, ಪುಟ್ಟ ಬಾಲಕನೊಬ್ಬ ಕೊಡೆ ಹಿಡಿದು ಕೂತಂತೆ ಇದು. ನೆಂಟರ ಮನೆಗೋ, ಸ್ನೇಹಿತರ ಮನೆಗೋ ಹೋದಾಗ ಅರ್ಧ ಕಪ್ ಚಹಾ ಕೊಟ್ಟಾಗ ಅಯ್ಯೋ ಅರ್ಧ ಕಪ್? ಅಂತ ಮೂಗು ಮುರಿಯುವವರು ಮತ್ತು ಓಹ್ ಅರ್ಧ ಕಪ್ ಎಂದು ಪುಳಕಗೊಳ್ಳುವವರ ಮನಃಸ್ಥಿತಿ ನೆನಪಾಗುತ್ತದೆ.

ಪಾತ್ರೆಗೆ ಅಂಟಿಕೊಂಡ ಒಂದೇ ಒಂದು ಅಗುಳನ್ನು ಮೆದ್ದು ಹೊಟ್ಟೆ ತುಂಬಿದ ಹಾಗೆ ಡರ್ ಎಂದು ತೇಗಿ ತೃಪ್ತಿಪಡುವ ಕೃಷ್ಣನ ನೆಲದ ಮನೋಭಾವ ನಮ್ಮನ್ನು ಜೀವಂತ ಇಡಬಲ್ಲದು. ಈ ಮೇಲಿನ ಸಂವಾದ ಮುಕ್ತಾಯವಾಗುವ ಬಗೆಯೂ ಬಹಳ ಮಾರ್ಮಿಕ. ಕೆಡಕು ಇದೆಯೆ? ಇದೆ, ಇಲ್ಲ. ಅದು ಒಳಿತಿನ ತಾತ್ಕಾಲಿಕ ಗೈರು. ಕೆಡುಕು ಕರಗುತ್ತದೆ. ಕಾಯಬೇಕು ಅಷ್ಟೇ...

• ರೊ. ಎಂ. ಮಾಧವಾಚಾರ್



**ಮುದ್ದುರಾಮನ ಚೌಪದಿ...**

ನಿನ್ನ ಕೊರಳಿಗೆ ಅಂದು ತೊಡಿಸಿದರು ಹೂಮಾಲೆ
ಮಣ್ಣಿಣಿಗೆ ಮುಗಿಬಿದ್ದು ನೀ ನಕ್ಕು ನಲಿದೆ
ಇದೆ ಇಂದು ನಿಂದೆನುಡಿ, ಬೇಡವೆಂದರೆ ಹೇಗೆ?
ಸಮದರ್ಶಿಯಾಗು ನೀ – ಮುದ್ದುರಾಮ

---

**ಕಣ್ಣಿನ ಕೂದಲುಗಳು ಉದುರುವುದು ಹಲವರಿಗೆ ಕಾಣುವ ಸಾಮಾನ್ಯ ಸಮಸ್ಯೆ. ಇದು ಪೋಷಕಾಂಶ ಕೊರತೆ, ಅಲರ್ಜಿ, ಮೇಕಪ್ ಅಥವಾ ಕಣ್ಣು ಒರೆಸುವ ಅಭ್ಯಾಸದಿಂದ ಆಗಬಹುದು. ಸರಳ ಮನೆಮದ್ದಿನಿಂದ ಇದನ್ನು ಕಡಿಮೆ ಮಾಡಬಹುದು.**

**ರೊ. ಡಾ. ಕಾಂಚನ್ ಕುಲಕರ್ಣಿ,** ಬಿ.ಎ.ಎಂ.ಎಸ್. ಎಂ.ಡಿ. ಪಿಜಿಡಿಸಿಸಿಟಿ
**ಪಂಚಮಿ ಆಯುರ್ವೇದ ಚಿಕಿತ್ಸಾ ಕೇಂದ್ರ, ಕುವೆಂಪು ರಸ್ತೆ, ಶಿವಮೊಗ್ಗ**

- **ತೆಂಗಿನ ಎಣ್ಣೆ** : ರಾತ್ರಿ ಮಲಗುವ ಮೊದಲು ಸ್ವಲ್ಪ ತೆಂಗಿನ ಎಣ್ಣೆ ಕಣ್ಣಿನ ಕೂದಲುಗಳಿಗೆ ಹಚ್ಚಿ ಕೂದಲು ಬೆಳವಣಿಗೆಗೆ ಸಹಕಾರಿ.
- **ಆಮ್ಲಾ** : ಆಮ್ಲಾ ರಸ ಅಥವಾ ಪುಡಿ ಸೇವನೆ ವಿಟಮಿನ್ ಸಿ ಹೆಚ್ಚಾಗಿ ಇರುವುದರಿಂದ ಕೂದಲು ಬೆಳವಣಿಗೆಗೆ ಸಹಾಯ.
- **ಕ್ಯಾಸ್ಟರ್ ಆಯಿಲ್** : ಕಾಟನ್ ಸ್ಟಿಕ್ ಮೂಲಕ ಸ್ವಲ್ಪ ಹಚ್ಚಿ ಕೂದಲು ಬೆಳೆಯಲು ಮತ್ತು ಉದುರುವಿಕೆ ಕಡಿಮೆ ಮಾಡಲು ಸಹಕಾರಿ.
- **ಹಾಲು** : ಹಾಲಿನಲ್ಲಿ ಕಾಟನ್ ತೋಯಿಸಿ, ಕಣ್ಣಿನ ಮೇಲೆ ಇಡಿ. ಕೂದಲು ಬಲವಾಗಲು ಇದು ಸಹಕಾರಿ.
- **ಅಲೋವೆರಾ** : ತಾಜಾ ಅಲೋವೆರಾ ಜೆಲ್ ಸ್ವಲ್ಪ ಹಚ್ಚಿ ಕೂದಲು ಬೆಳವಣಿಗೆಗೆ ಸಹಾಯಕ
- **ಆಹಾರದಲ್ಲಿ** : ಪ್ರೋಟೀನ್ ಆಹಾರ (ಬೇಳೆ, ಹಾಲು, ಮೊಟ್ಟೆ) ಹಸಿರು ತರಕಾರಿ, ಬಾದಾಮಿ, ಅಕ್ಕರೇಕಾಯಿ.

**ಇವುಗಳನ್ನು ಮಾಡಬಾರದು:**
ಕಣ್ಣುಗಳನ್ನು ಉಜ್ಜಬಾರದು. ಹಳೆಯ ಮೇಕಪ್ ಬಳಸಬೇಡಿ,
ಹೆಚ್ಚು ಕೆಮಿಕಲ್ ಇರುವ ಮಸ್ಕಾರಾ ಹಚ್ಚಬಾರದು.

**ಗಮನಿಸಿ:**
ಸ್ವಚ್ಛತೆ ಬಹಳ ಮುಖ್ಯ.
ಕಣ್ಣಿನ ಭಾಗದಲ್ಲಿ ಬಳಸುವ ವಸ್ತುಗಳು ಕ್ಲೀನ್ ಆಗಿರಬೇಕು.
ತುಂಬಾ ಹೆಚ್ಚು ಉದುರುವಿಕೆ ಇದ್ದರೆ ಕಣ್ಣು ಕೆಂಪಾಗುವುದು ಅಥವಾ ಅಲರ್ಜಿ ಇದ್ದರೆ ವೈದ್ಯರನ್ನು ಸಂಪರ್ಕಿಸಿ.

## THE OBJECT OF ROTARY

The Object of Rotary is to encourage and foster the ideals of service as a basis of worthy enterprise and in particular, to encourage and foster:

**01 FIRST**
The development of acquaintance as an opportunity for service;

**02 SECOND**
High ethical standards in business and professions; the recognition of the worthiness of all useful occupations; and the dignifying of each Rotarian's occupation as an opportunity to serve society;

**03 THIRD**
The application of the ideal of service in each Rotarian's personal, business/professional, and community life;

**04 FOURTH**
The advancement of international understanding, goodwill, and peace through a world fellowship of business and professional persons united in the ideal of service.

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495